ಶ್ರೀ ಎಂ. ಎಸ್. ಕೃಷ್ಣನ್.—ಒಳಗಿಂದೊಳಗೆ ಮಾಡುವುದು ಬೇಡ, ಬಹಿರಂಗವಾಗಿ ನಡೆಯಲಿ. ಮಂತ್ರಿಗಳು ಶಾಸಕರನ್ನು ಕಡಗಣಿಸಿದಾಗ ಅವರ ಕಾರ್ಯಕ್ರಮವನ್ನು ವಿರೋಧ ಮಾಡಲೇಬೇಕಾಗುತ್ತದೆ. ಮಾನ್ಯ ರಾಚಯ್ಯನವರ ಮಾತನ್ನು ನಾನು ಒಪ್ಪುತ್ತೇನೆ. ಅವರ ಮಾತು ಸಮಂಜಸವಾಗಿದೆ.

ಮನವಿಗಳನ್ನು ಒಪ್ಪಿಸುವುದು

Sri Malharagowda S. Patil.—Sir, I beg to present the following Petitions regarding :

a) Construction of Tank at Ammanagi village near Kurubara Kodi in Nidasosi Halla, Belguam District.

b) Construction of Lift Irrigation Scheme on the Ghataprabha river near Salemwadi, Belgaum District.

c) Improvement and widening of Roads and Bridges commencing from National Highway No. 4 near Sankeshwar through Gadahinglaja upto Maharastra border.

Mr. Speaker.—Petitions presented.

ಗಮನ ಸೆಳೆಯುವ ಸೂಚನೆಗಳು

ವಿಷಯ : ಗಂಗಾವತಿ ಠಾಣೆಯಲ್ಲಿ ಪೋಲೀಸರ ಕಿರುಕುಳದಿಂದ ಪೀರ್ ಮಹಮದ್ ಎಂಬವರು ತೀರಿಕೊಂಡಿರುವ ಬಗ್ಗೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಜೂನ್ 25ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಗಂಗಾವತಿ ಪೋಲೀಸ್ ಠಾಣೆಯಲ್ಲಿ ಪೀರ್ ಮಹಮದ್ ಎಂಬ ಯುವಕನನ್ನು ಆತಿಥ್ಯ ಮಾಡಿದ ಪ್ರಕರಣ ಹೊರಬಂದಿದೆ. ಜುಲೈ 13ರಂದು ಆತ ವಿಕ್ಟೋರಿಯ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದಾನೆ. ಆ ಬಗ್ಗೆ ಗೃಹಮಂತ್ರಿಗಳ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಗೃಹಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಹೇಳಿಕೆಯನ್ನು ಮಾಡಬಯಸುತ್ತೇನೆ.

ರಾಯಚೂರು ಜಿಲ್ಲೆಯ ಗಂಗಾವತಿಯ ಪಿಂಜಾರು ಓಣಿಯಲ್ಲಿ 85 ವರ್ಷದ ಮೌಲಾನಸಾಬ್ ಎಂಬುವರು ಒಬ್ಬರೇ ಬೇರೆ ವಾಸವಾಗಿದ್ದರು. ಈತನ ಅಣ್ಣತಮ್ಮಂದಿರು ಬೇರೆಬೇರೆ ವಾಸವಾಗಿದ್ದು ಈತನ ಸಣ್ಣ ತಮ್ಮ ಶಮಿದ್‌ಸಾಬ್‌ನ ಎಂಟು ಹತ್ತು ವರ್ಷದ ಮಗಳು ರಜಮಾ ಎಂಬುವಳು ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ಅದರಂತೆ ದಿನಾಂಕ 29-4-85ರಂದು ಬೆಳಿಗ್ಗೆ ಸದರಿ ರಜಮಾ ಎಂಬುವಳು ತನ್ನ ತಾತನಿಗೆ ಊಟ ತೆಗೆದುಕೊಂಡು ಹೋಗಿ ಮನೆ ಹೊರಗಿನ ಬಾಗಿಲಿಗೆ ಬೀಗ ಹಾಕಿದ್ದನ್ನು ಕಂಡು ತಾತನು ಯಾವುದಾದರೂ ಊರಿಗೆ ಹೋಗಿರಬಹುದೆಂದು ಭಾವಿಸಿ ಮನೆಗೆ ವಾಪಸ್ಸು ಬಂದಳು. ಇದೇರೀತಿ 2-5-85ರವರೆಗೂ ಪ್ರತಿನಿತ್ಯ ಊಟ ತೆಗೆದುಕೊಂಡು ಹೋಗಿ ವಾಪಸ್ಸು ಬರುತ್ತಿದ್ದಳು. ಆದೇದಿನ ಮೌಲಾನಸಾಬ್‌ನ ಪುತ್ರ ದೊಡ್ಡ ಶಮಿದ್‌ಸಾಬ್ ಸದರಿ ಮನೆಯಿಂದ ದುರ್ವಾಸನೆ ಬರುತ್ತಿರುವುದನ್ನು ತಿಳಿದು ಗಂಗಾವತಿ ನಗರ ಪೋಲೀಸ್ ಠಾಣೆಗೆ ಹೋಗಿ ಅಲ್ಲಿ ಕರ್ತವ್ಯದ ಮೇಲಿದ್ದ ಆರಕ್ಷಕ ಉಪ ನಿರೀಕ್ಷಕರಿಗೆ ವರದಿ ಮಾಡಲು ಅದರ ಆಧಾರದ ಮೇಲೆ ಯುಡಿ ಆರ್‌ನಂ. 3:85 ಕಲಂ 174ರ ಪ್ರಕಾರ ಪ್ರ ದಂ ಸಂ ಮೊಕದ್ದಮೆ ದಾಖಲು ಮಾಡಿಕೊಂಡು ಸದರಿ ಮನೆಯ ಹತ್ತಿರ ಹೋಗಿ ಪಂಚರ ಸಮಕ್ಷಮ ಹೊರಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆಯಿಸಿ ಒಳಗೆ ಪ್ರವೇಶಿಸಿ ನೋಡಲು ಮುದುಕ ಮೌಲಾನಸಾಬ್‌ನ ಹೆಣವು ಹಾಸಿಗೆ ಮೇಲೆ ಅಂಗಾತ ಬಿದ್ದಿದ್ದು ಕಂಡು ಬಂತು. ಆರಕ್ಷಕ ಉಪನಿರೀಕ್ಷಕರು ಶವದ ಪಂಚನಾಮೆ ಮಾಡುವಾಗ ಗಾಯಗಳು ಕಂಡುಬಂದಿರುವುದಿಲ್ಲ. ಈ ಮುದುಕನ ಸಾವಿನ ಬಗ್ಗೆ ಅವರ ರಕ್ತ ಸಂಬಂಧಿಕರಾಗಲೀ ಅಥವಾ ಅಜುಬಾಜು ವಾಸವಿರುವ ಜನರಾಗಲೀ ಯಾವ ತರಹದ ಅನುಮಾನವನ್ನೂ ವ್ಯಕ್ತಪಡಿಸಲಿಲ್ಲ, ಶವಪರೀಕ್ಷೆಯನ್ನು ಆಲ್ಲೇ ನಡೆಸಿದ ಗಂಗಾವತಿಯ ಸರ್ಕಾರಿ ವೈದ್ಯರು ಹೆಣವು ಕೊಳೆತಿರುವುದರಿಂದ ಸಾವಿನ ಬಗ್ಗೆ ಖಚಿತವಾದ ಅಭಿಪ್ರಾಯ ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿರುತ್ತಾರೆ, ಆದರೂ ಮನೆಯ ಹೊರಗಿನ ಬಾಗಿಲಿಗ ಯಾರು ಬೀಗ ಹಾಕಿದರು ಎಂಬ ಬಗ್ಗೆ ತನಿಖೆ ಮುಂದುವಿರೆಸಿದಾಗ, ಆ ಓಣಿಯ ಜನರಿಂದ, ಚಿತ್ತವಾಡಗಿ ಹೊಸ ಪೇಟೆಯ ಮಹಬೂಬ್‌ನ ಮಗ ಪೀರ್ ಮಹಮದ್ ಎಂಬ ಹುಡುಗ ಬರುತ್ತಿದ್ದು, ಮೃತನ ಮೊಮ್ಮಗ

ಳೊಂದಿಗೆ ಮದುವೆ ನಿಶ್ಚಯವಾಗಿತ್ತು. ದಿನಾಂಕ 28-4-85ರ ರಾತ್ರಿ ಸದರಿಯವನು ಮೃತನ ಮನೆಗೆ ಬಂದ ವಿಷಯ ಗೊತ್ತಾಯಿತು. ಈ ವಿಷಯದಲ್ಲಿ ಎಷ್ಟರಮಟ್ಟಿಗೆ ಸತ್ಯಾಸತ್ಯತೆಯನ್ನು ತಿಳಿಯಲು ಆರಕ್ಷಕ ಉಪ ನಿರೀಕ್ಷಕರು ಸದರಿ ಪೀರ್ ಮಹಮದ್‌ನನ್ನು ಹುಡುಕಲು ಪ್ರಯತ್ನಿಸಿದರು.

2. ದಿನಾಂಕ 28-5-1985ರಂದು ಬೆಳಿಗ್ಗೆ 8 ಘಂಟೆ ಸುಮಾರಿಗೆ ಗುಡುಗುಂಡಿ ಮಹಮದ್ ಖಾಸಿಂ ಸಾಬ್ ಎಂಬುವರು ಗಂಗಾವತಿ ನಗರ ಠಾಣೆಗೆ ಬಂದು ಆಲ್ಲಿಯ ಆರಕ್ಷಕ ಉಪ ನಿರೀಕ್ಷಕರಿಗೆ ತಾನು ಅದೇದಿನ ಬೆಳಿಗ್ಗೆ ಪೀರ್ ಮಹಮದ್‌ನನ್ನು ಗಂಗಾವತಿ ನಗರ ಗ್ಯಾಸ್ ಕಂಪನಿಯ ಹತ್ತಿರ ಭೇಟಿ ಆಗಿದ್ದುದಾಗಿಯೂ ಮೌಲಾನಸಾಬ್‌ನ ಕೊಲೆ ವಿಚಾರದಲ್ಲಿ ಅವನನ್ನು ಕೇಳಿದಾಗ ಸದರಿ ಪೀರ್ ಮಹಮದನು ಗಾಬರಿಯಾಗಿ ತನ್ನ ತಪ್ಪನ್ನು ಒಪ್ಪಿಕೊಂಡನೆಂದೂ, ಪೀರ್ ಮಹಮದನಿಗೆ ಪೋಲೀಸ್ ಠಾಣೆಗೆ ಹೋಗೋಣವೆಂದು ಹೇಳಿದಾಗ ಆತನು ಓಡಿಹೋಗಿರುವುದಾಗಿಯೂ ವರದಿ ಮಾಡಿದರು. ಆರಕ್ಷಕ ಉಪ ನಿರೀಕ್ಷಕರು ಭಾರತ ದಂಡ ಸಂಹಿತೆ ಕಲಂ 392, 302 ಹಾಗೂ 201ರ ಪ್ರಕಾರ ಅಪರಾಧ ಸಂಖ್ಯೆ 184:85 ಎಂದು ಮೊಕದ್ದಮೆಯನ್ನು ದಾಖಲು ಮಾಡಿಕೊಂಡರು. ನಂತರ ಬೆಳಿಗ್ಗೆ 9-30 ಘಂಟೆಗೆ ಪೀರ್ ಮಹಮದ್‌ನನ್ನು ಹುಡುಕಿ ದಸ್ತಗಿರಿ ಮಾಡಿ ತನಿಖೆಯನ್ನು ಮುಂದುವರಿಸಲಾಯಿತು. ಪೀರ್ ಮಹಮದ್‌ನನ್ನು ನಗರ ಠಾಣೆಯ ಲಾಕ್‌ಅಪ್‌ನಲ್ಲಿ ಇಡಲಾಯಿತು. ಅದೇ ದಿನ 12-00 ಘಂಟೆಗೆ ಪೀರ್ ಮಹಮದ್ ಕಕ್ಕಸ್‌ಗೆ ಹೋಗುವ ನೆಪ ಮಾಡಿಕೊಂಡು ಅಲ್ಲಿ ಬಾಗಿಲು ಮುಚ್ಚಿಕೊಂಡು ಸಾಯಲು ಪ್ರಯತ್ನಿಸಿದನು. ಆಗ ಪೀರ್ ಮಹಮದನನ್ನು ಕರೆದುಕೊಂಡು ಬಂದು ಪೊಲೀಸ್ ಠಾಣೆಯ ಎದುರಿಗೆ ಇದ್ದ ಸರ್ಕಾರಿ ದವಾಖಾನೆಗೆ ಮುಂದಿನ ಚಿಕಿತ್ಸೆಗಾಗಿ ದಾಖಲು ಮಾಡಲಾಯಿತು. ಗಂಗಾವತಿ ಸರ್ಕಾರಿ ಆಸ್ಪತ್ರೆಯಲ್ಲಿ ಪೀರ್ ಮಹಮದ್‌ನನ್ನು ಚಿಕಿತ್ಸೆಗಾಗಿ ಸೇರಿಸಿದಾಗ ಆಸ್ಪತ್ರೆಯ ಅಪರಾಧ ರಿಜಿಸ್ಟರ್‌ನಲ್ಲಿ ಆರೋಪಿಯ ಬಗ್ಗೆ ಕೆಳಕಂಡಂತೆ ನಮೂದು ಮಾಡಲಾಗಿದೆ.

"The injured person was first seen by the undersigned at 12-20 noon on the 28-5-85 and the examination was commenced at 12-20 noon on the 28-5-85 when the following injuries were found ligature mark of size one inch dia meter over the Thoroid cartilage of the Neck extending obliguely upwards on either side upto the Mostoried process. M. O. is of the opinion that the nature of the ligature mark may be due to an attempted sucide. The ligature mark is fresh in nature".

2. ಸರ್ಕಾರಿ ಆಸ್ಪತ್ರೆಯಲ್ಲಿ ಆಕ್ಸಿಜನ್ ಸೌಲಭ್ಯ ಇಲ್ಲದೆ ಇದ್ದುದರಿಂದ ಪೀರ್ ಮಹಮದನನ್ನು ಗಂಗಾವತಿಯ ಡಾ. ಚಂದ್ರಪ್ಪ ನರ್ಸಿಂಗ್ ಹೋಂಗೆ ತೆಗೆದುಕೊಂಡು ಹೋಗಲಾಯಿತು. ಅಲ್ಲಿ ಚಿಕಿತ್ಸೆಯ ನಂತರ ಸರ್ಕಾರಿ ವೈದ್ಯರು ಮುಂದಿನ ಚಿಕಿತ್ಸೆಗಾಗಿ ಪೀರ್ ಮಹಮದನನ್ನು ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕೆಂದು ಅಭಿಪ್ರಾಯಪಟ್ಟಿದ್ದರಿಂದ ಗಂಗಾವತಿ ಜೆ.ಎಂ.ಎಫ್.ಸಿ.ರವರ ಮುಂದೆ ಪೀರ್ ಮಹಮದನನ್ನು ಹಾಜರು ಮಾಡಿ ಅವರ ಅನುಮತಿ ಪಡೆದು ಅದೇದಿನ ಬಳ್ಳಾರಿ ಆಸ್ಪತ್ರೆಗೆ ವಿಶೇಷ ಚಿಕಿತ್ಸೆಗಾಗಿ ದಾಖಲು ಮಾಡಲಾಯಿತು. ವೈದ್ಯಕೀಯ ಅಭಿಪ್ರಾಯದ ಪ್ರಕಾರ ತಾರೀಖು 3-6-1985ರಂದು ಮಾನಸಿಕ ಆಸ್ಪತ್ರೆಗೆ ಸೇರಿಸಲಾಯಿತು. ಬೆಂಗಳೂರು ಮಾನಸಿಕ ಆಸ್ಪತ್ರೆಯಲ್ಲಿ ತಾರೀಖು 17-6-1985ರವರೆಗೆ ಚಿಕಿತ್ಸೆ ಪಡೆದ ನಂತರ ಆಲ್ಲಿಯ ವೈದ್ಯರ ಅಭಿಪ್ರಾಯದಂತೆ ಮುಂದಿನ ಚಿಕಿತ್ಸೆಗಾಗಿ ಪೀರ್ ಮಹಮದನನ್ನು ನಗರದ ವಿಕ್ಟೋರಿಯ ಆಸ್ಪತ್ರೆಗೆ ಸೇರಿಸಲಾಯಿತು. ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಪೀರ್ ಮಹಮದನು ವಿಕ್ಟೋರಿಯ ಆಸ್ಪತ್ರೆಯ ಜೈಲ್‌ವಾರ್ಡ್‌ನಲ್ಲಿ 13-7-85ರಂದು ಬೆಳಿಗ್ಗೆ ಸುಮಾರು 11-30 ಘಂಟೆಗೆ ಮೃತಪಟ್ಟನು. ಶವದ ಮರಣೋತ್ತರ ಪರೀಕ್ಷೆ ಮಾಡಿದ ಬೆಂಗಳೂರು ಮೆಡಿಕಲ್ ಕಾಲೇಜ್ ಫೊರೆಂಸಿಕ್ ಸೈನ್ಸ್ ಪ್ರಾಧ್ಯಾಪಕರಾದ ಡಾ. ಬಿ. ಸಿ, ಚಂದ್ರೇಗೌಡರವರು ಪೀರ್ ಮಹಮದನ ಮರಣದ ಕಾರಣ ಕುರಿತು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ,

"Opinion as to cause of death reserved pending Histopatholo-gical report and the case sheet from the hospitals". ಇನ್ನೂ ಹಿಸ್ಟೋಪಾತಿ ಲಾಜಿಕಲ್ ಪರೀಕ್ಷೆ ಪೂರ್ತಿಯಾಗಿಲ್ಲ.

ಶ್ರೀ ಯು. ಭೂಪತಿ.—ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಶ್ರೀ ಪೀರ್‌ಮದನು ಒಂದು ಬನಿಯನ್‌ನಿಂದ ನೇಣು ಹಾಕಿಕೊಂಡು ಸತ್ತಿದ್ದಾನೆಂದು ಹೇಳಿದ್ದಾರೆ. ಅವನಿಗೆ 22-23ವರ್ಷ ವಯಸ್ಸು

ಪಿಯುಸಿ. ಓದುತ್ತಿದ್ದ ಹುಡುಗ. ಸುಮಾರು 50 ಕೆ.ಜಿ. ಮೇಲೆ ತೂಕ ಇದ್ದಾನೆ. ಬನಿಯನ್‌ನಲ್ಲಿ ನೇಣು ಹಾಕಿಕೊಂಡರೆ ಸಾಯುವುದಕ್ಕೆ ಸಾಧ್ಯವಿಲ್ಲ, ಆತ ಆಸ್ಪತ್ರೆಯಲ್ಲಿದ್ದಾಗ ನಾನು ಖುದ್ದಾಗಿ ಹೋಗಿ ನೋಡಿದ್ದೇನೆ. ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ, ಆವನಿಗೆ ಮೂಗಿನಿಂದ ಹಾಲನ್ನು ಹಾಕುತ್ತಿದ್ದರು. ಆವನ ತಲೆಗೆ 5-6 ಬ್ಯಾಂಡ್ಜ್ ಹಾಕಲ್ಪಟ್ಟಿತು. ಆತ ನೇಣು ಹಾಕಿಕೊಂಡು ಸತ್ತಿದ್ದರೆ ತಲೆಗೆ ಏಕೆ ಬ್ಯಾಂಡ್ಜ್ ಹಾಕುತ್ತಿದ್ದರು ? ಪೋಲೀಸರು ಮೇ 28ರಂದು ದಸ್ತಗಿರಿ ಮಾಡಿದಂತ ರಿಪೋರ್ಟ್ ಕೊಟ್ಟಿದ್ದಾರೆ. ಪೀರ್ ಮಹಮದನು 24ರಂದು ಪೋಲೀಸ್ ಠಾಣೆಯಿಂದ ತನ್ನ ತಂದೆತಾಯಿಗಳಿಗೆ ಬರೆದ ಪತ್ರದ ಜೆರಾಕ್ಸ್ ಕಾಪಿ ನನ್ನ ಪತ್ರದಲ್ಲಿ ಇದೆ. ಪೋಲೀಸರು 24ಕ್ಕೆ ಮುಂಚೆ ಆತನಿಗೆ ಹೆರಾಸ್ ಮಾಡಿದ್ದಾರೆ. ಕೊನೆಗೆ ಸಾಯುತ್ತಾನೆ ಅಂದಾಗ ನೇಣುಹಾಕಿಕೊಂಡಿದ್ದಾನೆಂದು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಆತನನ್ನು ಬಳ್ಳಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ. ಅಲ್ಲಿ ಈ ಕೇಸ್ ಆಗುವುದಿಲ್ಲ ಅಂದಾಗ ಇಲ್ಲಿಗೆ ತಂದು ವಿಕ್ಟೋರಿಯ ಆಸ್ಪತ್ರೆಗೆ ಸೇರಿಸಿದ್ದಾರೆ. ಆದಕಾರಣ ನಾನು ಹೇಳುತ್ತಿದ್ದೇನೆ, ಈ ವಿಷಯವನ್ನು ಸಿಐಡಿಗೆ ವಹಿಸಬೇಕು. ಆವನು ಕ್ಲೀನಾಗಿ ಹೇಳಿದ್ದಾನೆ, ''ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ನಾನು ಕಾಲಿಗೆ ಬಿದ್ದು ಕೇಳಿಕೊಳ್ಳುತ್ತೇನೆ, ಪೋಲೀಸ್ ಸ್ಟೇಷನ್ನಿನಲ್ಲಿ ನನ್ನ ತಪ್ಪು ಇಲ್ಲದಿದ್ದರೂ ಹೊಡೆಯುತ್ತಿದ್ದಾರೆ ಎಂದು ಸ್ಪಷ್ಟವಾಗಿ ಹೇಳಿ ಒಬ್ಬ ವ್ಯಕ್ತಿಯ ಹೆಸರನ್ನೂ ಹೇಳಿದ್ದಾನೆ. ಆ ವ್ಯಕ್ತಿ ಕಂತೆ ಕಂತೆ ಹಣವನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರಿಗೆ ಕೊಟ್ಟಮೇಲೆ ಆ ಹಣ ತೆಗೆದುಕೊಂಡ ನಂತರ ನನಗೆ ಹೊಡೆಯುವುದಕ್ಕೆ ಶುರುಮಾಡಿದ್ದಾರೆ ಎಂದು ಪತ್ರದಲ್ಲಿ ಹೇಳಿದ್ದಾನೆ. ಹಣ ಕೊಟ್ಟಿದ್ದನ್ನು ನಾನು ನೋಡಿದ್ದೇನೆ ಎಂದು ಹೇಳಿದ್ದಾನೆ.'' ಈ ವ್ಯಕ್ತಿಯ ಕೇಸನ್ನು ಡೀಲ್ ಮಾಡತಕ್ಕ ವಕೀಲರಿಂದ ಪತ್ರ ಬಂದಿದೆ. ಅವರು ಅದಾಲ್ಲಿ ಏನು ಹೇಳುತ್ತಿದ್ದಾರೆಂದರೆ ''ಮುಖ್ಯಮಂತ್ರಿಯವರು ಎಸ್‌ಪಿ. ಆವರಿಂದ ತನಿಖೆಗೆ ಆದೇಶ ನೀಡಿದ್ದಾರೆ, ಇದರಿಂದ ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವುದಕ್ಕೆ ಆಗುವುದಿಲ್ಲ, ಆದ್ದರಿಂದ ಸಿಐಡಿ. ತನಿಖೆಗೆ ವಹಿಸಬೇಕು. ಎಂದು ಹೇಳಿದ್ದಾರೆ. ಸಿಐಡಿ. ತನಿಖೆಗೆ ಇದನ್ನು ಒಳಪಡಿಸಬೇಕು ಮತ್ತು ವೈದ್ಯಕೀಯ ಪುಡುಗನ ತಂದೆತಾಯಿಗಳಿಗೆ ಆವರು ಬಡ ಕುಟುಂಬಕ್ಕೆ ಸೇರಿದವರಾಗಿರುವುದರಿಂದ 20 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ನಾನು ಗೃಹಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಸರ್ಕಲ್ ಇನ್ಸ್‌ಪೆಕ್ಟರ್‌ನಿಂದ ಹಿಡಿದು ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೇಬಲ್‌ಗಳವರೆಗೆ ಎಲ್ಲರನ್ನೂ ಸಸ್ಪೆಂಡ್ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮರಣಕ್ಕೆ ಕಾರಣ ಏನು ಎಂಬ ಬಗ್ಗೆ ಒಪೀನಿಯನ್ ರಿಸರ್ವ್ ಮಾಡಿದ್ದೇವೆಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯರು ಹೇಳಿದ್ದಾರೆ ಆವರ ಒಪೀನಿಯನ್ ಬಂದಮೇಲೆ ಏನು ಕಾರಣ ಎಂಬುದು ಅರ್ಥವಾಗುತ್ತದೆ. ಸಾಮಾನ್ಯವಾಗಿ ಪೋಲೀಸರು ಹೊಡೆದರೆ ತಕ್ಷಣ ಎರಡು ಮೂರು ದಿವಸದಲ್ಲಿ ಆಸ್ಪತ್ರೆಗೆ ಸಾಗಿಸುತ್ತಾರೆ. ಇವನು 45 ದಿವಸದ ನಂತರ ಆಸ್ಪತ್ರೆಯಲ್ಲಿ ಸತ್ತಿರತಕ್ಕದ್ದು. ಸತ್ತಿರತಕ್ಕ ಕಾರಣ ಏನು ಎಂದು ಹೇಳಿದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಆಧ್ಯಕ್ಷರೇ....

ಆಧ್ಯಕ್ಷರು.—ನೀವು ವಿತಕ್ಕೆ ಮಾತನಾಡುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಇದು ಒಬ್ಬರ ಪ್ರಶ್ನೆಯಲ್ಲ. ಪೋಲೀಸರು ಕರೆದುಕೊಂಡುಹೋಗಿ ಸಿಕ್ಕಾಪಟ್ಟೆ ಹೊಡೆದು ಜನರನ್ನು ಸಾಯಿಸಬಹುದು, ನಾವು ಕೇಳಬಾರದೆ ? ಮತ್ತೆ ನಾವು ಇಲ್ಲಿ ವಿತಕ್ಕಿರುವುದು ? ಹುಗುಗನನ್ನು ಹೊಡೆದು ಸಾಯಿಸಿದ್ದಾರೆ.

ಆಧ್ಯಕ್ಷರು.—ನೀವು ಈ ತರಹ ಮಾತನಾಡುವುದು ಥಲೋ ಅಲ್ಲ. ರೂಲ್ಸ್ ರೆಗ್ಯುಲೇಷನ್ಸ್ ನೋಡಿ. ನಿಮಗೆ ಏನು ಹಕ್ಕಿದೆ ಮಾತನಾಡುವುದಕ್ಕೆ ?

ಶ್ರೀ ಎಂ. ಎಸ್. ಕೃಷ್ಣನ್.—ಆವರಿಗೆಷ್ಟು ಹಕ್ಕಿವೆಯೋ ಆಷ್ಟೇ ಹಕ್ಕು ನನಗೂ ಇದೆ.

ಆಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಭೂಪತಿಯವರೇ ನೀವು ಕೇಳಿ. ಏನೋ ಒಂದು ಸಾರಿ ಲೀನಿಯನ್ಸ್ ಕೊಟ್ಟರೆ ಹೀಗೆ ಮಾಡಬಾರದು.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಭೂಪತಿಯವರು ಕೇಳಲಿ. ಆಮೇಲೆ ನಾನು ಕೇಳುತ್ತೇನೆ.

ಶ್ರೀ ಯು. ಭೂಪತಿ.—ಸಚಿವರು ಕೆಲವು ವರದಿ ಬರುವುದಿದೆ ಎಂದು ಹೇಳುತ್ತಿದ್ದಾರೆ. ತಕ್ಷಣ ಈ ಪ್ರಕರಣದಲ್ಲಿ ಇನ್ವಾಲ್ವ್ಡ್ ಆಗಿರುವ ಎಲ್ಲ ಅಧಿಕಾರಿಗಳನ್ನು ಅಂದರೆ ಸರ್ಕಲ್ ಇನ್ಸ್‌ಪೆಕ್ಟರ್‌ರಿಂದ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೇಬಲ್‌ಗಳವರೆಗೆ ಅಮಾನತ್ತಿನಲ್ಲಿಡಬೇಕು. ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕಾದರೆ ಎಸ್.ಪಿ.ಯವರಿಂದ ವಿಚಾರಣೆ ಆಗುವುದು ಬೇಡ. ಆವರಿಂದ ನಿಷ್ಪಕ್ಷಪಾತವಾದ ವಿಚಾರಣೆ ಆಗುವುದಿಲ್ಲ, ಈ ಪ್ರಶ್ನೆಯನ್ನು ವಿಧಾನಸಭೆಯಲ್ಲಿ ಎತ್ತುತ್ತೇನೆ ಎಂದು ಗೊತ್ತಾದ

ಮೇಲೆ ಆ ಹುಡುಗನ ತಂದೆತಾಯಿಗಳಿಗೆ ಕಿರುಕುಳ ಕೊಡುವುದನ್ನು ಬಿಟ್ಟಿದ್ದಾರೆ, ಆಲ್ಲಿಯವರೆಗೆ ಆ ತಂದೆ ತಾಯಿಗಳು ನನ್ನ ಹತ್ತಿರ ಬಂದು ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದರು. ಈ ಪತ್ರ ಆ ಹುಡುಗ ಬರೆದದ್ದಲ್ಲ ಎಂದು ಹೇಳುವುದಾದರೆ ಆತ ಸ್ಕೂಲಿನಲ್ಲಿ ಓದುವಾಗ ಬರೆಯುತ್ತಿದ್ದ ನೋಟ್ ಪುಸ್ತಕವನ್ನು ನಾನು ತಂದಿದ್ದೇನೆ. ಇದನ್ನು ನೋಡಿ ಇದನ್ನು ಪೂರ್ತಾಗಿ ಇಟ್ಟುಕೊಳ್ಳಬಹುದು. ಅವನ ಹತ್ತಿರ ಒಡವೆ ಇತ್ತು, ಹಣ ಇತ್ತು ಎಂದು ಹೇಳುತ್ತಿದ್ದಾರೆ. ಎಷ್ಟು ಹಣವನ್ನು ಹುಡುಗನಿಂದ ವಸೂಲು ಮಾಡಿದರು ? ಅರೆಸ್ಟ್ ಮಾಡಿದಾಗ ಎಷ್ಟು ಹಣ ಇತ್ತು ? ಎಫ್‌ಐಆರ್‌ನಲ್ಲಿ ಹೇಳಿರತಕ್ಕ ಹಣಕ್ಕೂ ಈ ಹಣಕ್ಕೂ ವ್ಯತ್ಯಾಸ ಇದೆ. ಇದು ಪ್ರಿಪ್ಲಾನ್ಡ್ ಮಾಡಿ ಮಾಡಿರತಕ್ಕ ಕೆಲಸ. ಪೋಲೀಸರೇ ಹುಡುಗನನ್ನು ನೇಣು ಹಾಕಿದ್ದಾರೆ ಎಂದು ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಸಿಒಡಿ ಗೆ ಒಪ್ಪಿಸಬೇಕು ಮತ್ತು ಆಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು. ಜೊತೆಗೆ 20 ಸಾವಿರ ರೂಪಾಯಿಗಳ ಪರಿಹಾರವನ್ನು ಅವನ ಕುಟುಂಬದವರಿಗೆ ಕೊಡಬೇಕು ಎಂದು ಆಗ್ರಹಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ನೇಣು ಹಾಕಿಕೊಂಡ ಎಂದು ವರದಿ ಇದೆ. ಸತ್ತದ್ದು ನೇಣು ಹಾಕಿಕೊಂಡ 45 ದಿವಸದ ಮೇಲೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರ್ ಒಪೀನಿಯನ್ ರಿಸರ್ವ್ ಮಾಡಿ ಇಟ್ಟುಕೊಂಡಿದ್ದಾರೆ. ಅವರಿಂದ ವರದಿ ಬರಲಿ. ನಂತರ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಅಲ್ಲಗಳೆದಿಲ್ಲ. ಅವರ ಒಪೀನಿಯನ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಗುಂಡೂರಾಯರ ಸರ್ಕಾರ ಗುಂಡು ಸರ್ಕಾರ ಎಂದು ಹೇಳಿದ ಜನ ನೀವು. ಇವತ್ತು ಪೋಲೀಸ್ ಸ್ಟೇಷನ್‌ಗೆ ಜನ ಹೋದರೆ ವಾಪಸ್ ಬರುವುದೇ ಇಲ್ಲ. ಇಲ್ಲಿ ತಾವು ಸುಲಭವಾಗಿ ಉತ್ತರ ಕೊಡುತ್ತೀರಿ. ನೇಣು ಹಾಕಿಕೊಂಡ ಮನುಷ್ಯನಿಗೆ ಪೆಟ್ಟು ಹೇಗೆ ಬೀಳುತ್ತದೆ ? ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಮನುಷ್ಯನಿಗೆ ತಲೆಗೆ ಪೆಟ್ಟು ಏತಕ್ಕಾಯಿತು ?

ಶ್ರೀ ಬಿ. ರಾಚಯ್ಯ.—ಅವರು ಆಸ್ಪತ್ರೆಯಲ್ಲಿ ನೋಡಿ ಬಂದಿದ್ದಾರೆ, ನಾನು ಅವನನ್ನು ನೋಡಿಲ್ಲ. ನಾನು ನನಗೆ ಬಂದಿರುವ ವರದಿ ಪ್ರಕಾರ ಉತ್ತರ ಕೊಡಬೇಕಾಗುತ್ತದೆ. ವಿಕ್ಟೋರಿಯಾ ಆಸ್ಪತ್ರೆ ಡಾಕ್ಟರು ಒಪೀನಿಯನ್ ಕೊಟ್ಟಿಲ್ಲ, ಅವನನ್ನು ಹೊಡೆದು ಸಾಯಿಸಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ, ಡಾಕ್ಟರಿಂದ ವರದಿ ಬರಲಿ, ಕೂಲಂಕಷವಾಗಿ ವಿಚಾರ ಮಾಡೋಣ ಎಂದು ಹೇಳಿದ್ದೇನೆ. ತಪ್ಪಿತಸ್ಥರಿಗೆ ಶಿಕ್ಷೆ ಮಾಡೋಣ. ಯಾರನ್ನೂ ರಕ್ಷಣೆ ಮಾಡುವ ಉದ್ದೇಶ ನಮಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ರಕ್ಷಣೆ ಮಾಡುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಎವಿಡೆನ್ಸ್ ಕಂಪ್ಲೀಟಾಗಿ ಮುಚ್ಚಿಡುವುದಕ್ಕೆ ಅವಕಾಶವಿದೆ. ಸಂಬಂಧಪಟ್ಟ ಪೋಲೀಸ್ ಸಬ್-ಇನ್‌ಸ್ಪೆಕ್ಟರ್ ಮುಚ್ಚಿಡುವುದಕ್ಕೆ ಪ್ರಯತ್ನಪಡುತ್ತಾನೆ. ಭಯಭೀತಿ ಹುಟ್ಟಿಸುತ್ತಾರೆ. ಏತಕ್ಕೆಂದರೆ ಅವರು ಬಡವರು. ಆದ್ದರಿಂದ ತಕ್ಷಣ ಸಂಬಂಧಪಟ್ಟ ಪೋಲೀಸ್ ಸಬ್ ಇನ್‌ಸ್ಪೆಕ್ಟರನ್ನು ಸಸ್ಪೆನ್ಷನ್‌ನಲ್ಲಿಡಬೇಕು. ಪ್ರೈಮಾಫೇಸೆ ಕೇಸ್ ಇದೆ ಎಂದು ಗೊತ್ತಾದಮೇಲೆ ಸಸ್ಪೆಂಡ್‌ಮಾಡಿ, ನಂತರ ಸಿಒಡಿ. ತನಿಖೆ ಮಾಡಿ.

ಶ್ರೀ ಬಿ. ರಾಚಯ್ಯ.—ಇದನ್ನೂ ಯೋಚನೆ ಮಾಡಬೇಕು. ಮುದುಕನನ್ನು ಸೇರಿಸಿಬಿಟ್ಟು ಬೀಗ ಹಾಕಿಕೊಂಡು ಹೋಗಿದ್ದಾರಲ್ಲ ಆ ಕಡೆಯೂ ಗಮನಹರಿಸಬೇಕು.

ಶ್ರೀ ಯು. ಭೂಪತಿ.—ಸಿಒಡಿ. ತನಿಖೆ ಮಾಡಿದರೆ ಎಲ್ಲಾ ಹೊರಗೆ ಬರುತ್ತದೆ.

ಅಧ್ಯಕ್ಷರು.—ಇದು ಕಾಲ್ ಅಟೆನ್‌ಷನ್ನೋ ? ಅರ್ಧಗಂಟೆ ಚರ್ಚೆಯೋ ? ಕುಳಿತುಕೊಳ್ಳಿ. ಬಂಗಾರಪ್ಪನವರು, ಯಡಿಯೂರಪ್ಪನವರು, ವಸಂತ ಬಂಗೇರರವರು, ಶಿವನಂಜಪ್ಪನವರು, ಓಂಕಾರ ಮೂರ್ತಿಯವರು ತಮ್ಮ ಗಮನ ಸೆಳೆಯುವ ಸೂಚನೆ ಬಗ್ಗೆ ಸರ್ಕಾರದ ಗಮನ ಸೆಳೆಯಿರಿ.

ವಿಷಯ : ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ, ಸರ್ಕಾರಿ ಕಿರಿಯ ಮತ್ತು ಹಿರಿಯ ಕಾಲೇಜುಗಳಲ್ಲಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವ ಉಪನ್ಯಾಸಕರ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—ಉಪನ್ಯಾಸಕರ ಸಕ್ರಮ ನೇಮಕಾತಿಯಲ್ಲಿ ವಿಳಂಬವಾದುದರಿಂದ ಹಿರಿಯ ಮತ್ತು ಕಿರಿಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ಥಳೀಯ